UASB LIBRARY
Jai Kisan
Agri Newspaper Clippings
Saturday 07-10-2023
Pg. 1

ಕನ್ನಡಪ್ರಭ
BENGALURU Edition
Oct 7, 2023 Page No. 05
Powered by : eReleGo.com

'ಕೃಷಿ ತಂತ್ರಜ್ಞಾನ ರೈತರ ಮನೆ ಬಾಗಿಲಿಗೆ ತಲುಪಲಿ'

ಬೆಂ.ಕೃಷಿ ವಿವಿ 58ನೇ ಸಂಸ್ಥಾಪನಾ ದಿನದಲ್ಲಿ ನಿವೃತ್ತ ವಿಜ್ಞಾನಿ ಡಾ.ಸಿ.ಎಲ್.ಲಕ್ಷ್ಮೀಪತಿ ಗೌಡ ಸಲಹೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು ಕೃಷಿ ತಂತ್ರಜ್ಞಾನಗಳನ್ನು ರೈತರ ಮನೆ ಬಾಗಿಲಿಗೆಕೃಷಿವಿವಿಗಳುತಲುಪಿಸಬೇಕು ಜತೆಗೆ ಕೃಷಿಯಿಂದ ವಿಮುಕ್ತರಾಗುತ್ತಿರುವ ಯುವಕರನ್ನು ಕೃಷಿಯತ್ತ ಆಕರ್ಷಿಸಲು ಸೂಕ್ತ ಯೋಜನೆ ರೂಪಿಸಬೇಕಿದೆ ಎಂದು ಹೈದರಾಬಾದ್ ಅಂತಾರಾಷ್ಟ್ರೀಯ ಅರೆ ಶುಷ್ಕ ಉಷ್ಣವಲಯ ಬೆಳೆಗಳ ಸಂಶೋಧನಾ ಸಂಸ್ಥೆಯ ವಿಶ್ರಾಂತ ಉಪ ಮಹಾ ನಿರ್ದೇಶಕ ಡಾ.ಸಿ.ಎಲ್.ಲಕ್ಷ್ಮೀಪತಿ ಗೌಡ ಸಲಹೆ ನೀಡಿದರು.

ಗುರುವಾರ ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನಕೇಂದ್ರ (ಜಿಕೆವಿಕೆ) ಆವರಣದಲ್ಲಿ ಆಯೋಜಿಸಲಾಗಿದ್ದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 58ನೇ ಸಂಸ್ಥಾಪನಾದಿನಾಚರಣೆಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತ ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯಲ್ಲಿ ಜಾಗತಿಕವಾಗಿ ಶೇ. 9.3ರಷ್ಟು ಪಾಲು ಹೊಂದಿದ್ದು, ವಿಶ್ವದ ಎರಡನೇ ಅತಿದೊಡ್ಡ ಉತ್ಪಾದಕ ದೇಶವಾಗಿದೆ ಎಂದು ಹೇಳಿದರು.



ಬೆಂಗಳೂರು ಕೃಷಿ ವಿವಿ 58ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಪ್ರಾಧ್ಯಾಪಕ ಡಾ.ಕೆ.ಎನ್.ಶ್ರೀನಿವಾಸಪ್ಪ ಅವರಿಗೆ ಐಸಿಎಆರ್ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್ ಮತ್ತಿತರರಿದ್ದರು.

ಬೆಂಗಳೂರು ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್ ಮಾತನಾಡಿ, ಈ ವರ್ಷದಿಂದ ಕೃಷಿ ಮೇಳದಲ್ಲಿ ಬೀಜ ಪೂರೈಕೆ ಸರಪಳಿಯಲ್ಲಿನ ಅಡೆತಡೆಗಳನ್ನು ನಿವಾರಿಸಲು ಬೀಜ ಮೇಳವನ್ನು ಆಯೋಜಿಸಲಾಗುವುದು ಎಂದರು.

ಪ್ರಶಸ್ತಿ ಪ್ರದಾನ: ಪ್ರಾಧ್ಯಾಪಕ ಡಾ.ಕೆ.ಎನ್.ಶ್ರೀನಿವಾಸಪ್ಪ- ಐಸಿಎಆರ್ ಉತ್ತಮ ಶಿಕ್ಷಕ ಪ್ರಶಸ್ತಿ, ಹಿರಿಯ ಭತ್ತದ ತಳಿ ವಿಜ್ಞಾನಿ ಡಾ.ಸಿ.ಎ.ದೀಪಕ್-ನಾಗಮ್ಮ ದತ್ತಾತ್ರೇಯ ರಾವ್ ದೇಸಾಯಿ ಪ್ರಶಸ್ತಿ, ಮುಖ್ಯ ವಿಜ್ಞಾನಿ ಡಾ.ಮೂಡಲಗಿರಿಯಪ್ಪ-ಕಾಳಯ್ಯ ಕೃಷ್ಣಮೂರ್ತಿ ರಾಷ್ಟ್ರೀಯ ಪ್ರಶಸ್ತಿ, ಸಿಬ್ಬಂದಿ ತರಬೇತಿ ಘಟಕದ ಮುಖ್ಯಸ್ಥ ಡಾ.ಕೆ.ಶಿವರಾಮು- ಮೆ.ಜುವಾರಿ ಇಂಡಸ್ಟ್ರೀಸ್ ಲಿಮಿಟೆಡ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅತ್ಯುತ್ತಮ ಸೇವಾ ಸಿಬ್ಬಂದಿ ಪ್ರಶಸ್ತಿಗೆ ಎಂ.ಟಿ.ರಮೇಶ್ ಕುಮಾರ್, ಎಲ್.ಮಂಜುನಾಥ್, ವೈ.ಮುನಿಕೃಷ್ಣ, ತಾಂತ್ರಿಕ ಅಧಿಕಾರಿ ಎನ್.ಮಾನಸ, ಹಿರಿಯ ಕೃಷಿ ಕಾರ್ಮಿಕ ಚುಂಚನಹಳ್ಳಿ ಮಹದೇವ, ದಿನಗೂಲಿ ನೌಕರರಾದ ಶಶಿ ಭಾಜನರಾದರು. ಕೃಷ್ಣಮೂರ್ತಿ ಬಿಳಿಗೆರೆ (ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ), ಚಾಮರಾಜನಗರದ ಎಂ.ಆರ್.ಚಿದಾನಂದ ಗೌಡ ಹಾಗೂ ಹಾಸನದ ಪೂರ್ವಿಕ ಆರ್.ಗೌಡ (ಅತ್ಯುತ್ತಮ ವಿದ್ಯಾರ್ಥಿ) ಅವರಿಗೆ ಪ್ರಶಸ್ತಿ ವಿತರಿಸಲಾಯಿತು.

ದಿನಕರನ್ ಕರ್ನಾಟಕ
Dinakaran
7.10.2023

வேளாண் பல்கலை. அரங்கில் விவசாய கருவிகள் கண்காட்சி

பெங்களூரு. அக்.7: பெங்களூரு வேளாண் பல்கலைக்கழகத்தின் கண்காட்சி அரங்கில் விவசாய கருவிகள், தேனீ வளர்ப்பு, பயிர் செய்யும் முறை மற்றும் விவரங்கள் அனைவரையும் கவரும் வகையில் அமைந்துள்ளன.

பெங்களூரு விலுள்ள விவசாய பல்கலைக்கழகத்தில் பல்வேறு பயிற்சிகள் அளிக்கப்படுகிறது. விவசாய ஆராய்ச்சிகளையும் தொடர்ந்து நடத்தி வருகின்றனர். விவசாய பட்ட படிப்புகளுடன் உயர் பட்டமும் வழங்கி வருகிறது.

இது மட்டும் இன்றி சாதாரண நபர்கள் பயன் பெறும் வகையில் தேனீ வளர்ப்பு உள்ளிட்ட பயிற்சிகளும் அளிக்கப்பட்டு வருகின்றன. விவசாயம் மேற்கொள்ளும் போது பயன்படுத்தப்படும் கருவிகள், அறுவடை செய்த பயிர்களை பாதுகாப்பது, மதிப்பு கூட்டுதல் உள்ளிட்ட பயிற்சிகளும் ஜிகேவிகே பல்கலைக்கழகத்தின் சார்பில் அளிக்கப்பட்டு வருகிறது.

காந்தி பெயரிலான இந்த பல்கலைக்கழகத்தில் பயிர்களுக்கு அளிக்க வேண்டிய ஊட்டச்சத்து, மரங்களை வெட்டி கவாத்து செய்யும் முறை



▶ கால்நடை பண்ணை மாதிரி



▶ தேங்காய் உரிப்பதற்கான கருவி



▶ தேனீ வளர்க்கும் பெட்டி, உபகரணங்கள்



▶ முயல் வளர்ப்பு விழிப்புணர்வு

கள் உள்ளிட்டவை செயல் முறையில் விளக்கம் அளிக்கப்படுகிறது.

பல்கலைக்கழகத்தின் சார்பில் ஆதிகாலத்தில் விவசாயத்திற்கு பயன்படுத்தப்பட்ட கருவிகள் அதாவது மண்ணை உழுது பண்படுத்தும் ஏர் கலப்பை உள்ளிட்ட பல் வேறு மாதிரிகள் கண்காட்சிக்காக வைக்கப்பட்டுள்ளன.

அதுமட்டும்இன்றி இந்த கண்காட்சியில் தென்னை மரம் ஏறுவதற்கான சிறப்பு கருவிகள், தேங்காய் நாரை தனியாக பிரிப்பதற்கு பயன் பெறும் கருவிகள், விதைகள் விதைப்பதற்கு பயன்படும் கருவிகள், களை செடிகளை அகற்றும் கருவிகள் உள்ளிட்டவை காட்சியில் இடம்பெற்றுள்ளன. அது மட்டும் இன்றி கோழி வளர்ப்பு மற்றும் அது சார்ந்த தொழில் நுட்ப விளக்கம், முயல் வளர்ப்பு மட்டும் இன்றி தேனீக்கள் வளர்ப்பு மற்றும் அதன் தொழில் நுட்பமும் தேவையான நபர்களுக்கு அளிக்கப்படுகிறது.

நாட்டுகோழி வளர்ப்பு அதற்கான சந்தை வாய்ப்புகளும் விவசாயிகளுக்கு எளிமையான விளக்கத்துடன் பயிற்சி அளிக்கப்பட்டு வருகின்றன.

இது குறித்து அதிகாரி ஒருவர் கூறுகையில், பல்கலைக்கழகத்தின் சார்பில் விவசாயத்தை அனைவரும் அறிந்து கொள்வதற்கான வழிமுறைகள் எளிய முறையில் விளக்கத்துடன் பயிற்சி அளிக்கப்படுகிறது. பல்கலைக்கழகத்தின் வளாகத்திலுள்ள கண் காட்சி அரங்கில் நமது மண்ணிற்கு ஏற்ற பயிர் வகைகள், தொழில் நுட்பம் உள்ளிட்டவை காட்சி படுத்தப்பட்டுள்ளன. மாணவ மாணவிகள் இதை பார்வையிடும் போது விவசாயத்தின் முழு வடிவத்தையும் எளிதில் அவர்களால் உணர்ந்து கொள்ளமுடியும், என்றார். இந்த கண்காட்சியில் நுழையும் போது

ஒரு வனத்தில் நுழைவ துபோன்ற சூழல் செயற்கையாக அதே நேரம் இயற்கை போல் உருவாக்கப்பட்டுள்ளது.

வயல் வெளிகளில் கொக்கு உள்ளிட்ட பறவைகள், அடர்ந்த காட்டில் நரி சத்தம் எழுப்பவது, கோழி, முயல் போன்ற சிறு பிராணிகள் உலவுவது போன்றும் அது எழுப்பும் சத்தங்களுடன் இதை அமைத்துள்ளனர். எனவே, இதை பார்வையிடும்போது உண்மையாகவே ஒரு விவசாய நிலத்திற்குள் அல்லது அடர்ந்த வனத்திற்குள் செல்வது போன்ற உணர்வு ஏற்படும் என்பது குறிப்பிடத்தக்கது.

For more information visit
University Library Website
Web - uasbagrilibindia.org
E-mail- librarian@uasbangalore.edu.in

ಗೋಧಿ ತಳಿಯ ಅಭಿವೃದ್ಧಿಯಂತಹ ನಿರ್ದಿಷ್ಟ ಕ್ಷೇತ್ರಗಳಲ್ಲಿ ಸ್ವಾಮಿನಾಥನ್ ಅವರ ಮುಂಚೂಣಿ ಕೆಲಸವು ಗೋಧಿ ಉತ್ಪಾದನೆಯಲ್ಲಿ ಗಮನಾರ್ಹ ಹೆಚ್ಚಳಕ್ಕೆ ಕಾರಣವಾಯಿತು. ಇದರಿಂದಾಗಿ ಭಾರತವು ಆಹಾರ ಕೊರತೆಯ ದೇಶದ ಹಂತದಿಂದ ಸ್ವಾವಲಂಬಿ ರಾಷ್ಟ್ರವಾಗಿ ಪರಿವರ್ತನೆಯಾಯಿತು. ಈ ಅದ್ಭುತ ಸಾಧನೆಯು ಸ್ವಾಮಿನಾಥನ್ ಅವರಿಗೆ ಭಾರತೀಯ ಹಸಿರು ಕ್ರಾಂತಿಯ ಪಿತಾಮಹ ಎಂಬ ಬಿರುದನ್ನು ಗಳಿಸಿಕೊಟ್ಟಿತು.

ಕೃಷಿಯಲ್ಲಿ ಕ್ರಾಂತಿಗೈದ ದಾರ್ಶನಿಕ ಸ್ವಾಮಿನಾಥನ್

ಕೆಲವು ದಿನಗಳ ಹಿಂದಷ್ಟೇ ಪ್ರೊಫೆಸರ್ ಎಂ.ಎಸ್. ಸ್ವಾಮಿನಾಥನ್ ಅವರು ನಮ್ಮನ್ನು ಅಗಲಿದರು. ಕೃಷಿ ವಿಜ್ಞಾನದಲ್ಲಿ ಕ್ರಾಂತಿ ತಂದ ದಾರ್ಶನಿಕರೊಬ್ಬರನ್ನು ನಮ್ಮ ದೇಶವು ಕಳೆದುಕೊಂಡಿತು. ಆದರೂ ಭಾರತಕ್ಕೆ ಅವರ ಕೊಡುಗೆಯು ಸುವರ್ಣಾಕ್ಷರಗಳಲ್ಲಿ ಅಚ್ಚಳಿಯದೆ ಉಳಿದು ಅಜರಾಮರವಾಗಲಿದೆ.

ಪ್ರೊ. ಎಂ.ಎಸ್. ಸ್ವಾಮಿನಾಥನ್ ಅವರು ಭಾರತದ ಬಗ್ಗೆ ಅಪಾರ ಪ್ರೀತಿ ಹೊಂದಿದ್ದರು. ನಮ್ಮ ರಾಷ್ಟ್ರ, ವಿಶೇಷವಾಗಿ ನಮ್ಮ ರೈತರು ಸಮೃದ್ಧಿಯ ಜೀವನ ನಡೆಸಬೇಕೆಂದು ಬಯಸಿದ್ದರು. ಶೈಕ್ಷಣಿಕವಾಗಿ ಪ್ರತಿಭಾವಂತರಾಗಿದ್ದ ಅವರಿಗೆ ಯಾವುದೇ ವೃತ್ತಿಯನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳುವ ಅವಕಾಶವಿತ್ತು. ಆದರೆ, 1943ರ ಬಂಗಾಳದ ಕ್ಷಾಮ ಅವರ ಮೇಲೆ ಎಷ್ಟು ಪ್ರಭಾವ ಬೀರಿತೆಂದರೆ, ತಾವು ಮಾಡುವ ಒಂದೇ ಒಂದು ಕೆಲಸ ಯಾವುದಾದರೂ ಇದ್ದರೆ ಅದು ಕೃಷಿಯ ಅಧ್ಯಯನ ಎಂದು ಸ್ಪಷ್ಟ ಸಂಕಲ್ಪತೊಟ್ಟರು.

ವಯಸ್ಸಿನಲ್ಲಿ ಚಿಕ್ಕವರಾದರೂ ಅವರು ಡಾ. ನಾರ್ಮನ್ ಬೋರ್ಲಾಗ್ ಅವರೊಂದಿಗೆ ಸಂಪರ್ಕಕ್ಕೆ ಬಂದರು. ಜತೆಗೆ ಅವರ ಕೆಲಸವನ್ನು ಬಹಳ ಆಳವಾಗಿ ಅನುಸರಿಸಿದರು. 1950ರ ದಶಕದಲ್ಲಿ ಅವರಿಗೆ ಅಮೆರಿಕದಲ್ಲಿ ಬೋಧಕರಾಗುವ ಅವಕಾಶ ಒದಗಿಬಂದಿತು. ಆದರೆ, ಅವರು ಭಾರತದಲ್ಲಿ ಮತ್ತು ಭಾರತಕ್ಕಾಗಿ ಕೆಲಸ ಮಾಡಲು ಬಯಸಿದ್ದರಿಂದ ಅದನ್ನು ತಿರಸ್ಕರಿಸಿದರು.


ಸ್ವಾಮಿನಾಥನ್ ಅವರು ನಮ್ಮ ರಾಷ್ಟ್ರವನ್ನು ಸ್ವಾವಲಂಬನೆ ಮತ್ತು ಆತ್ಮವಿಶ್ವಾಸದ ಪಥದತ್ತ ಮುನ್ನಡೆಸಿದ ಸವಾಲಿನ ಸಂದರ್ಭಗಳ ಬಗ್ಗೆ ಎಲ್ಲರೂ ಯೋಚಿಸಬೇಕೆಂದು ನಾನು ಬಯಸುತ್ತೇನೆ. ಸ್ವಾತಂತ್ರ್ಯದ ನಂತರದ ಮೊದಲ ಎರಡು ದಶಕಗಳಲ್ಲಿ, ಆಪಾರವಾದ ಸವಾಲುಗಳು ನಮ್ಮೆದುರಿಗಿದ್ದವು. ಅವುಗಳಲ್ಲಿ ಆಹಾರದ ಕೊರತೆಯೂ ಒಂದಾಗಿತ್ತು. 1960ರ ದಶಕದ ಆರಂಭದಲ್ಲಿ ಭಾರತವು ಕ್ಷಾಮದ ಕರಿಛಾಯೆಯೊಂದಿಗೆ ಹೋರಾಡುತ್ತಿತ್ತು. ಸರಿಯಾಗಿ ಇದೇ ಸಮಯದಲ್ಲೇ ಪ್ರೊ. ಸ್ವಾಮಿನಾಥನ್ ಅವರ ಅಚಲ ಬದ್ಧತೆ ಮತ್ತು ದೂರದೃಷ್ಟಿಯು ಕೃಷಿ ಸಮೃದ್ಧಿಯ ಹೊಸ ಯುಗಕ್ಕೆ ನಾಂದಿ ಹಾಡಿತು.

ಕೃಷಿ ಹಾಗೂ ಗೋಧಿ ತಳಿಯ ಅಭಿವೃದ್ಧಿಯಂತಹ ನಿರ್ದಿಷ್ಟ ಕ್ಷೇತ್ರಗಳಲ್ಲಿ ಸ್ವಾಮಿನಾಥನ್ ಅವರ ಮುಂಚೂಣಿ ಕೆಲಸವು ಗೋಧಿ ಉತ್ಪಾದನೆಯಲ್ಲಿ ಗಮನಾರ್ಹ ಹೆಚ್ಚಳಕ್ಕೆ ಕಾರಣವಾಯಿತು. ಇದರಿಂದಾಗಿ ಭಾರತವು ಆಹಾರ ಕೊರತೆಯ ದೇಶದ ಹಂತದಿಂದ ಸ್ವಾವಲಂಬಿ ರಾಷ್ಟ್ರವಾಗಿ ಪರಿವರ್ತನೆಯಾಯಿತು. ಈ ಅದ್ಭುತ ಸಾಧನೆಯು ಸ್ವಾಮಿನಾಥನ್ ಅವರಿಗೆ ಭಾರತೀಯ ಹಸಿರು ಕ್ರಾಂತಿಯ ಪಿತಾಮಹ ಎಂಬ ಬಿರುದನ್ನು ಗಳಿಸಿಕೊಟ್ಟಿತು.

ಭಾರತದಲ್ಲಿ ಅಂತರ್ಗತವಾಗಿದ್ದ 'ನಾವು ಸಹ ಮಾಡಬಲ್ಲೆವು' ಎಂಬ ಮನೋಭಾವದ ಒಂದು ಮುನ್ನೋಟವನ್ನು ಹಸಿರುಕ್ರಾಂತಿಯು ಒದಗಿಸಿತು. ನಮಗೆ ಶತಕೋಟಿ ಸವಾಲುಗಳಿದ್ದರೇನಂತೆ, ಆ ಸವಾಲುಗಳನ್ನು ಪರಿಹರಿಸಲು ನಾವೀನ್ಯತೆಯ ಜ್ವಾಲೆಯೊಂದಿಗೆ ಶತಕೋಟಿ ಮನಸ್ಸುಗಳೂ ಇಲ್ಲಿವೆ ಎಂಬ ಆಶಾಕಿರಣವನ್ನು ಹೊರ ಹೊಮ್ಮಿಸಿತು. ಹಸಿರು ಕ್ರಾಂತಿ ಪ್ರಾರಂಭವಾದ ಐದು ದಶಕಗಳ ನಂತರ, ಭಾರತೀಯ ಕೃಷಿಯು ಹೆಚ್ಚು ಆಧುನಿಕ ಮತ್ತು ಪ್ರಗತಿಪರವಾಗಿದೆ. ಇದಕ್ಕೆ ಪ್ರೊ. ಸ್ವಾಮಿನಾಥನ್ ಅವರು ಹಾಕಿದ ಅಡಿಪಾಯವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ.

ಹಲವು ವರ್ಷಗಳಲ್ಲಿ, ಅವರು ಆಲೂಗಡ್ಡೆ ಬೆಳೆಗಳ ಮೇಲೆ ಪರಿಣಾಮ ಬೀರುವ ಪರಾವಲಂಬಿ ಜೀವಿಗಳನ್ನು ಎದುರಿಸುವ ಕುರಿತು ಸಂಶೋಧನೆ ಕೈಗೊಂಡರು. ಅವರ ಸಂಶೋಧನೆಯು ಆಲೂಗಡ್ಡೆ ಬೆಳೆಗಳಿಗೆ ಶೀತ ಹವಾಮಾನವನ್ನು ತಡೆದುಕೊಳ್ಳಲು ಅನುವು ಮಾಡಿಕೊಟ್ಟಿತು. ಇಂದು, ಜಗತ್ತು ಸಿರಿಧಾನ್ಯಗಳು ಅಥವಾ 'ಶ್ರೀಅನ್ನ' ಶಕ್ತಿಯುತ ಆಹಾರ (ಸೂಪರ್ ಫುಡ್) ಎಂದು ಮಾತನಾಡುತ್ತಿದೆ. ಆದರೆ, ಪ್ರೊಫೆಸರ್ ಸ್ವಾಮಿನಾಥನ್ ಅವರು 1990ರ ದಶಕದಿಂದಲೇ ಸಿರಿಧಾನ್ಯಗಳ ಬಗ್ಗೆ ಚರ್ಚೆಯನ್ನು ಪ್ರೋತ್ಸಾಹಿಸಿದ್ದರು.

ಪ್ರೊ. ಸ್ವಾಮಿನಾಥನ್ ಅವರೊಂದಿಗಿನ ನನ್ನ ವೈಯಕ್ತಿಕ ಒಡನಾಟಗಳು ಬಹಳ ವ್ಯಾಪಕವಾಗಿವೆ. 2001ರಲ್ಲಿ ನಾನು ಗುಜರಾತ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಅವು ಪ್ರಾರಂಭವಾದವು. ಆ ದಿನಗಳಲ್ಲಿ, ಗುಜರಾತ್ ತನ್ನ ಕೃಷಿ ಪರಿಣತಿಗೆ ಅಷ್ಟೊಂದು ಹೆಸರುವಾಸಿಯಾಗಿರಲಿಲ್ಲ. ಸತತ ಬರಗಾಲ, ಪ್ರಚಂಡ ಸೈಕ್ಲೋನ್ ಮತ್ತು ಭೂಕಂಪವು ರಾಜ್ಯದ ಬೆಳವಣಿಗೆಯ ಪಥದ ಮೇಲೆ ಪರಿಣಾಮ ಬೀರಿತ್ತು. ನಾವು ಪ್ರಾರಂಭಿಸಿದ ಅನೇಕ ಉಪಕ್ರಮಗಳಲ್ಲಿ, ಮಣ್ಣಿನ ಆರೋಗ್ಯ ಕಾರ್ಡ್ ಕೂಡ ಒಂದಾಗಿತ್ತು. ಇದು ಮಣ್ಣನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಮತ್ತು ಸಮಸ್ಯೆಗಳು ಉದ್ಭವಿಸಿದರೆ ಅವುಗಳನ್ನು ಪರಿಹರಿಸಲು ನಮಗೆ ಅನುವು ಮಾಡಿಕೊಟ್ಟಿತು. ಈ ಯೋಜನೆಯ ಹಿನ್ನೆಲೆಯಲ್ಲಿ ನಾನು ಪ್ರೊ. ಸ್ವಾಮಿನಾಥನ್ ಅವರನ್ನು ಭೇಟಿಯಾಗಿದ್ದೆ. ಅವರು ಯೋಜನೆಯನ್ನು ಶ್ಲಾಘಿಸಿದರು. ಜತೆಗೆ, ಅದಕ್ಕಾಗಿ ತಮ್ಮ ಅಮೂಲ್ಯವಾದ ಸಲಹೆ-ಸೂಚನೆಗಳನ್ನು ನಮ್ಮೊಂದಿಗೆ ಹಂಚಿಕೊಂಡರು. ಈ ಯೋಜನೆಯ ಬಗ್ಗೆ ಸಂದೇಹ ಹೊಂದಿದ್ದವರಿಗೆ ಮನವರಿಕೆ ಮಾಡಲು ಅವರ ಅನುಮೋದನೆಯೊಂದೇ ಸಾಕಾಗಿತ್ತು. ಇದು ಅಂತಿಮವಾಗಿ ಗುಜರಾತ್‌ನ ಕೃಷಿ ಯಶಸ್ಸಿಗೆ ವೇದಿಕೆಯನ್ನು ನಿರ್ಮಿಸಿತು.



ಮುಖ್ಯಮಂತ್ರಿಯಾಗಿ ನನ್ನ ಅಧಿಕಾರಾವಧಿಯಲ್ಲಿ ಮತ್ತು ನಾನು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಾಗಲೂ ನಮ್ಮ ಒಡನಾಟ ಮುಂದುವರಿಯಿತು. ನಾನು ಅವರನ್ನು 2016ರಲ್ಲಿ 'ಅಂತಾರಾಷ್ಟ್ರೀಯ ಕೃಷಿ-ಜೀವವೈವಿಧ್ಯ ಕಾಂಗ್ರೆಸ್'ನಲ್ಲಿ ಭೇಟಿಯಾಗಿದ್ದೆ. ಅದರ ಮುಂದಿನ ವರ್ಷ 2017ರಲ್ಲಿ, ಅವರು ಬರೆದ ಎರಡು ಭಾಗಗಳ ಪುಸ್ತಕ ಸರಣಿಯನ್ನು ನಾನೇ ಲೋಕಾರ್ಪಣೆ ಮಾಡಿದ್ದೆ.

ರೈತರು ಜಗತ್ತನ್ನು ಒಟ್ಟಿಗೆ ಬೆಸೆದು ಹಿಡಿದಿರುವ ಬಂಧಕ ಶಕ್ತಿ ಎಂದು 'ಕುರಾಲ್' ಕೃಷಿಕರನ್ನು ಬಣ್ಣಿಸುತ್ತದೆ. ಏಕೆಂದರೆ ಎಲ್ಲರನ್ನೂ ಪೋಷಿಸುವುದು ರೈತರೇ. ಪ್ರೊ. ಸ್ವಾಮಿನಾಥನ್ ಅವರು ಈ ತತ್ವವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಬಹಳಷ್ಟು ಜನರು ಅವರನ್ನು ಕೃಷಿ ವೈಜ್ಞಾನಿಕ - ಕೃಷಿ ವಿಜ್ಞಾನಿ ಎಂದು ಕರೆಯುತ್ತಾರೆ. ಆದರೆ, ಅವರು ಅದಕ್ಕೂ ಮಿಗಿಲಾದವರಾಗಿದ್ದರು ಎಂದು ನಾನು ಸದಾ ನಂಬುತ್ತೇನೆ. ಅವರು ನಿಜವಾದ ಕಿಸಾನ್ ವೈಜ್ಞಾನಿಕ - ರೈತರ ವಿಜ್ಞಾನಿ ಆಗಿದ್ದರು. ಅವರ ಹೃದಯದಲ್ಲಿ ಒಬ್ಬ ರೈತನಿದ್ದ. ಅವರ ಕಾರ್ಯ ಮತ್ತು ಕೃತಿಗಳ ಯಶಸ್ಸು ಕೇವಲ ಅವರ ಶೈಕ್ಷಣಿಕ ಉತ್ಕೃಷ್ಟತೆಗಷ್ಟೇ ಸೀಮಿತವಾಗಿಲ್ಲ; ಪ್ರಯೋಗಾಲಯಗಳ ಹೊರಗೆ, ಹೊಲ-ಗದ್ದೆಗಳಲ್ಲಿ ಅವುಗಳು ಬೀರಿದ ಪರಿಣಾಮದಲ್ಲಿ ಇದು ಅಡಗಿದೆ. ಸ್ವಾಮಿನಾಥನ್ ಅವರು ಕೈಗೊಂಡ ಕಾರ್ಯವು ವೈಜ್ಞಾನಿಕ ಜ್ಞಾನ ಮತ್ತು ಅದರ ಪ್ರಾಯೋಗಿಕ ಅನ್ವಯದ ನಡುವಿನ ಅಂತರವನ್ನು ಕಡಿಮೆ ಮಾಡಿತು. ಮಾನವ ಪ್ರಗತಿ ಮತ್ತು ಪರಿಸರ ಸುಸ್ಥಿರತೆಯ ನಡುವಿನ ಸೂಕ್ಷ್ಮ ಸಮತೋಲನವನ್ನು ಒತ್ತಿಹೇಳುವ ಮೂಲಕ ಅವರು ಸುಸ್ಥಿರ ಕೃಷಿಯನ್ನು ನಿರಂತರವಾಗಿ ಪ್ರತಿಪಾದಿಸಿದರು. ಸಣ್ಣ ರೈತರ ಜೀವನವನ್ನು ಸುಧಾರಿಸಲು ಮತ್ತು ಅಂತಹ ರೈತರು ಸಹ ನಾವೀನ್ಯತೆಯ ಫಲಗಳನ್ನು ಆನಂದಿಸುವುದನ್ನು ಖಾತರಿಪಡಿಸಲು ಪ್ರೊ. ಸ್ವಾಮಿನಾಥನ್ ನೀಡಿದ ವಿಶೇಷ ಮಹತ್ವವನ್ನು ನಾನು ಇಲ್ಲಿ ಒತ್ತಿ ಹೇಳಲೇಬೇಕು. ಮಹಿಳಾ ರೈತರ ಜೀವನವನ್ನು ಸುಧಾರಿಸುವ ಬಗ್ಗೆ ಅವರು ವಿಶೇಷವಾಗಿ ಉತ್ಸುಕರಾಗಿದ್ದರು.



ಪ್ರೊ. ಎಂ.ಎಸ್. ಸ್ವಾಮಿನಾಥನ್ ಅವರ ಬಗ್ಗೆ ಹೇಳಬೇಕಾದ ಮತ್ತೊಂದು ಗಮನಾರ್ಹವಾದ ವಿಷಯವಿದೆ. ಅವರು ನಾವೀನ್ಯತೆ ಮತ್ತು ಮಾರ್ಗದರ್ಶನದ ಪರಾಕಾಷ್ಠೆಯಾಗಿ ನಿಂತಿದ್ದಾರೆ. 1987ರಲ್ಲಿ ಅವರು 'ವಿಶ್ವ ಆಹಾರ ಪ್ರಶಸ್ತಿ'ಗೆ ಭಾಜನರಾದಾಗ, ಈ ಪ್ರತಿಷ್ಠಿತ ಗೌರವದ ಮೊದಲ ಪುರಸ್ಕೃತರೆನಿಸಿದ ಅವರು ಬಹುಮಾನವಾಗಿ ಬಂದ ಹಣವನ್ನು ಲಾಭರಹಿತ ಸಂಶೋಧನಾ ಪ್ರತಿಷ್ಠಾನವನ್ನು ಸ್ಥಾಪಿಸಲು ಬಳಸಿದರು. ಇಲ್ಲಿಯವರೆಗೆ, ಇದು ವಿವಿಧ ಕ್ಷೇತ್ರಗಳಲ್ಲಿ ವ್ಯಾಪಕವಾದ ಕೆಲಸವನ್ನು ಕೈಗೊಂಡಿದೆ. ಸ್ವಾಮಿನಾಥನ್ ಅವರು ಅಸಂಖ್ಯಾತ ಮನಸ್ಸುಗಳನ್ನು ಪೋಷಿಸಿದ್ದಾರೆ, ಅವರಲ್ಲಿ ಕಲಿಕೆ ಮತ್ತು ನಾವೀನ್ಯತೆಯ ಉತ್ಸಾಹ ತುಂಬಿದ್ದಾರೆ. ವೇಗವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ, ಸ್ವಾಮಿನಾಥನ್ ಅವರ ಜೀವನವು ಜ್ಞಾನ, ಮಾರ್ಗದರ್ಶನ ಮತ್ತು ನಾವೀನ್ಯತೆಯ ಅನಂತ ಶಕ್ತಿಯನ್ನು ನಮಗೆ ನೆನಪು ಮಾಡುತ್ತದೆ. ಅವರು ವಿವಿಧ ಸಂಸ್ಥೆಗಳ ನಿರ್ಮಾತೃವೂ ಆಗಿದ್ದರು, ಆಗಾಧ ಸಂಶೋಧನೆ ನಡೆಯುವ ಅನೇಕ ಕೇಂದ್ರಗಳನ್ನು ಅವರು ಹೊಂದಿದ್ದರು. ಮನಿಲಾದ 'ಅಂತಾರಾಷ್ಟ್ರೀಯ ಭತ್ತ ಸಂಶೋಧನಾ ಸಂಸ್ಥೆ'ಯ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದರು. 2018ರಲ್ಲಿ ವಾರಾಣಸಿಯಲ್ಲಿ 'ಅಂತಾರಾಷ್ಟ್ರೀಯ ಭತ್ತ ಸಂಶೋಧನಾ ಸಂಸ್ಥೆ'ಯ ದಕ್ಷಿಣ ಏಷ್ಯಾ ಪ್ರಾದೇಶಿಕ ಕೇಂದ್ರವನ್ನು ತೆರೆಯಲಾಯಿತು.

ಡಾ. ಸ್ವಾಮಿನಾಥನ್ ಅವರಿಗೆ ಗೌರವ ಸಲ್ಲಿಸಲು ನಾನು ಮತ್ತೆ 'ಕುರಲ್' ಉಲ್ಲೇಖಿಸಲು ಬಯಸುತ್ತೇನೆ. ಯೋಜನೆಯಲ್ಲಿ ದೃಢತೆಯನ್ನು ಹೊಂದಿರುವವರು, ತಾವು ಬಯಸಿದ ರೀತಿಯಲ್ಲಿ ತಾವು ಬಯಸಿದ್ದನ್ನು ಸಾಧಿಸುತ್ತಾರೆ ಎಂಬ ಉಲ್ಲೇಖ ಅದರಲ್ಲಿದೆ. ಕೃಷಿಯನ್ನು ಬಲಪಡಿಸಲು ಮತ್ತು ರೈತರಿಗೆ ಸೇವೆ ಸಲ್ಲಿಸಲು ಬಯಸುತ್ತೇನೆ ಎಂದು ತಮ್ಮ ಜೀವನದ ಆರಂಭದಲ್ಲಿಯೇ ಸಂಕಲ್ಪ ತೊಟ್ಟಿದ್ದ ಒಬ್ಬ ಕಟ್ಟಾಳು ಅವರಾಗಿದ್ದರು. ಅಲ್ಲದೆ, ಅವರು ತಾವು ಅಂದುಕೊಂಡಿದ್ದನ್ನು ಅಸಾಧಾರಣ ರೀತಿಯಲ್ಲಿ, ನವೀನ ರೀತಿಯಲ್ಲಿ ಮತ್ತು ಭಾವೋತ್ಕರ್ಷದಿಂದ ಮಾಡಿದರು. ನಾವು ಕೃಷಿ ನಾವೀನ್ಯತೆ ಮತ್ತು ಸುಸ್ಥಿರತೆಯ ಹಾದಿಯಲ್ಲಿ ಸಾಗುತ್ತಿರುವ ಈ ಹೊತ್ತಿನಲ್ಲಿ ಡಾ. ಸ್ವಾಮಿನಾಥನ್ ಅವರ ಕೊಡುಗೆಗಳು ನಮಗೆ ಸ್ಫೂರ್ತಿ ಮತ್ತು ಮಾರ್ಗದರ್ಶನ ನೀಡುತ್ತಲೇ ಇರುತ್ತವೆ. ಅವರು ಪ್ರೀತಿಸುತ್ತಿದ್ದ ತತ್ವಗಳಿಗೆ ನಮ್ಮ ಬದ್ಧತೆಯನ್ನು ನಾವು ಪುನರುಚ್ಚರಿಸುತ್ತಲೇ ಇರಬೇಕು. ರೈತರ ಹಿತಕ್ಕಾಗಿ ಹೋರಾಡಬೇಕು ಮತ್ತು ವೈಜ್ಞಾನಿಕ ಆವಿಷ್ಕಾರದ ಫಲಗಳು ನಮ್ಮ ಕೃಷಿ ವಿಸ್ತಾರದ ಬೇರುಗಳನ್ನು ತಲುಪುವಂತೆ ಖಾತರಿಪಡಿಸಬೇಕು. ಮುಂದಿನ ಪೀಳಿಗೆಗಾಗಿ ಬೆಳವಣಿಗೆ, ಸುಸ ರಿತೆ ಮತ್ತು ಸಮೃದ್ಧಿಯನ್ನು ಉತ್ತೇಜಿಸಬೇಕು.

07-10-2023
Vijayavani Pg 08



■ ಬಸವರಾಜ ಶಿವಪ್ಪ ಗಿರಗಾಂವಿ

ವಿಶ್ವ ಹತ್ತಿ ದಿನ ಇಂದು
ಬಿಳಿ ಬಂಗಾರ ಮನುಕುಲಕ್ಕೆ ಸಿಂಗಾರ



2019ರಿಂದ ಜಾಗತಿಕವಾಗಿ ವಿಶ್ವ ಹತ್ತಿ ದಿನ ಎಂದು ಆಚರಿಸಲಾಗುತ್ತಿದೆ. ವಿಶ್ವ ವಾಣಿಜ್ಯ ಸಂಸ್ಥೆಯು 2009 ಆಕ್ಟೋಬರ್ 7ರಂದು ವಿಶ್ವ ಹತ್ತಿ ದಿನವನ್ನು ಆಚರಿಸಲು ವಿಶ್ವ ಸಂಸ್ಥೆಗೆ ಪ್ರಸ್ತಾಪ ಮಾಡಿತು. ನಂತರದಲ್ಲಿ ಈ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ ವಿಶ್ವ ಸಂಸ್ಥೆಯು ಹತ್ತಿಯಿಂದಾಗುವ ಆರೋಗ್ಯಕರ ಬಳಕೆಯನ್ನು ಮನಗಂಡು 2021ರ ಸಾಮಾನ್ಯಸಭೆಯಲ್ಲಿ ಅಂಗೀಕರಿಸುವ ಮೂಲಕ ಪ್ರತಿವರ್ಷ ಆಕ್ಟೋಬರ್ 7ನೆಯ ದಿನಾಂಕವನ್ನು ಅಧಿಕೃತವಾಗಿ ವಿಶ್ವ ಹತ್ತಿ ದಿನವನ್ನಾಗಿ ಆಚರಿಸಲು ಪ್ರಾರಂಭಿಸಿತು. ಹತ್ತಿಯು ಆರಿವೆಯಾಗಿ ಮಾತ್ರ ಉಪಯೋಗವಾಗದೆ, ಆಹಾರವಾಗಿಯೂ ಮನುಕುಲದ ಅವಶ್ಯಕತೆಯನ್ನು ಪೂರೈಸುತ್ತಿರುವುದು ವಿಶೇಷ. ಪ್ರಸ್ತುತ ವಿಶ್ವದಾದ್ಯಂತ ಅಂದಾಜು 80 ದೇಶಗಳಲ್ಲಿ 10 ಕೋಟಿ ಕುಟುಂಬಗಳು ಹತ್ತಿಯಿಂದ ನೇರವಾದ ಪ್ರಯೋಜನ ಪಡೆಯುತ್ತಿವೆ. ಇದರಲ್ಲಿ ಕನಿಷ್ಠ ಅರ್ಧದಷ್ಟು ಮಹಿಳೆಯರು ಇರುವುದು ವಿಶೇಷ. ಹತ್ತಿಯು ಬಡವ-ಬಲ್ಲಿದರೆನ್ನದೆ ಸಮಾಜದಲ್ಲಿನ ಪ್ರತಿಯೊಬ್ಬರಿಗೆ ಮರ್ಯಾದೆಯಿಂದ, ಆರೋಗ್ಯದಾಯಕವಾಗಿ ಹಾಗೂ ಆರಾಮದಾಯಕವಾಗಿ ಬದುಕಲು ಬಹಳ ಅವಶ್ಯವಿದೆ. ಆದರಂತೆ ವಿಶ್ವ ಸಂಸ್ಥೆಯ ಪ್ರಮುಖ ವ್ಯಾಪಾರ ಅಂಗಸಂಸ್ಥೆಗಳಾದ ಅಂತಾರಾಷ್ಟ್ರೀಯ ವ್ಯಾಪಾರ ಕೇಂದ್ರ (ಐಟಿಸಿ) ಹಾಗೂ ವಿಶ್ವ ವ್ಯಾಪಾರ ಸಂಸ್ಥೆ (ಡಬ್ಲ್ಯುಟಿಒ) ಸಹ ಹತ್ತಿಯ ಉತ್ಪಾದನೆ, ವ್ಯಾಪಾರ ಉತ್ತೇಜಿಸಲು ಹಾಗೂ ಸ್ಥಳೀಯ ಸಂಸ್ಕರಣಾ ಸಾಮರ್ಥ್ಯವನ್ನು ಸುಧಾರಿಸಲು ಆಫ್ರಿಕಾದಲ್ಲಿ ಕಾಟನ್-4 ಎಂದು ಕರೆಯಲ್ಪಡುವ ಹತ್ತಿ ಬೆಳೆಯುವ ದೇಶಗಳಾದ ಬೆನಿನ್, ಬುರ್ಕಿನಾ ಫಾಸೋ, ಚಾಡ್ ಹಾಗೂ ಮಾಲಿಗೆ ವಿಶೇಷ ಸಹಕಾರ ಕಲ್ಪಿಸಿವೆ.

ಒಂದು ಆಂದಾಜಿನ ಪ್ರಕಾರ ಒಂದು ಟನ್ ಹತ್ತಿಯು ಸರಾಸರಿ 5 ಜನರಿಗೆ ಉದ್ಯೋಗ ಒದಗಿಸುತ್ತದೆ. ವಿಶ್ವದ ಒಟ್ಟು ಹತ್ತಿ ಉತ್ಪಾದನೆಯ 80ರಷ್ಟನ್ನು ಉಡುಪುಗಳಿಗಾಗಿ ಬಳಸಲಾಗುತ್ತಿದೆ. ಶೇ. 15ರಷ್ಟು ಗೃಹೋಪಯೋಗಿ ಹಾಗೂ ಶೇ. 5ರಷ್ಟು ಇತರೆ ಕಾರಣಕ್ಕಾಗಿ ಉಪಯೋಗಿಸಲ್ಪಡುತ್ತಿದೆ. ವಿಶ್ವದ ಕೃಷಿಭೂಮಿಯ ಶೇ. 3ರಷ್ಟು ಪ್ರದೇಶವನ್ನು ಹತ್ತಿ ಆಕ್ರಮಿಸಿಕೊಂಡಿದೆ. ಒಂದು ಟನ್ ಹತ್ತಿ ಬೀಜದಿಂದ ಅಂದಾಜು 320 ಪೌಂಡುಗಳಷ್ಟು ಎಣ್ಣೆಯನ್ನು ಉತ್ಪಾದಿಸಲಾಗುತ್ತದೆ. ಇದನ್ನು ಅಡುಗೆ, ಸೌಂದರ್ಯವರ್ಧಕಗಳು, ಸಾಬೂನು ಹಾಗೂ ಪಶು ಆಹಾರವಾಗಿ ಬಳಸಲಾಗುತ್ತಿದೆ. ಪ್ರಪಂಚದಲ್ಲಿಯೇ ಚೀನಾ, ಭಾರತ, ಅಮೆರಿಕ, ಬ್ರೆಜಿಲ್ ಹಾಗೂ ಪಾಕಿಸ್ತಾನ ದೇಶಗಳು ಅತಿಹೆಚ್ಚು ಹತ್ತಿ ಬೆಳೆಯುವ ದೇಶಗಳಾಗಿವೆ.

ಹತ್ತಿಯಿಂದ ತಯಾರಿಸಲಾದ ಯಾವುದೇ ಬಟ್ಟೆಯು ಮಾನವನ ಶರೀರಕ್ಕೆ ಅತ್ಯಂತ ಮೃದು ಹಾಗೂ ಹಿತಕರವಾದ ಅನುಭವ ನೀಡುತ್ತದೆ. ಹತ್ತಿ ಬಟ್ಟೆಗಳು ಯಾವುದೇ ಬಣ್ಣದಲ್ಲಿದ್ದರೂ ಸಮಾಜದಲ್ಲಿ ಒಂದು ಗೌರವದ ಪ್ರತೀಕವಾಗಿ ಗುರುತಿಸಲ್ಪಡುತ್ತವೆ.

ಉತ್ಪಾದನೆ ಕುಂಠಿತ

ಸದ್ಯ ಯುಕ್ರೇನ್ ಯುದ್ಧ ಹಾಗೂ ಹತ್ತಿ ಬಟ್ಟೆಯ ಬಳಕೆಯಿಂದಾಗುವ ಆರೋಗ್ಯದಾಯಕ ಕ್ರಮಗಳ ಪರಿಣಾಮದಿಂದ ಹತ್ತಿಗೆ ಉತ್ತಮ ಬೆಲೆ ಬಂದಿದೆ. ಆದರೆ, ದೇಶಾದ್ಯಂತ ಮಳೆ ಕೊರತೆಯ ಪರಿಣಾಮವಾಗಿ 2023-24ನೇ ಹಂಗಾಮಿನಲ್ಲಿ ಹತ್ತಿ ಉತ್ಪಾದನೆಯು ಕುಂಠಿತವಾಗಬಹುದೆಂದು ನಿರೀಕ್ಷಿಸಲಾಗಿದೆ.

ಮುಂಚೂಣಿಯಲ್ಲಿ ಭಾರತ

ಬೆಳೆ ಬಂಗಾರ ಎಂದು ಕರೆಯಲ್ಪಡುವ ಹತ್ತಿಯನ್ನು ಭಾರತವು ವಿಶ್ವದ ಬೇಡಿಕೆಯ ಕೇ. 25ರಷ್ಟು ಪಾಲನ್ನು ಪೂರೈಸುತ್ತಿದೆ. ಆದರಂತೆ ವಿಶ್ವ ಮಟ್ಟದಲ್ಲಿ ಅತಿಹೆಚ್ಚು ಸ್ಪರ್ದಿತ ಬೇಡಿಕೆಯನ್ನು ಹೊಂದಿರುವ ದೇಶಗಳ ಪಟ್ಟಿಯಲ್ಲಿ ಭಾರತವು 2ನೆಯ ಸ್ಥಾನದಲ್ಲಿದೆ. ಭಾರತದಲ್ಲಿ ಅಂದಾಜು 5 ಕೋಟಿ ಜನರು ಪರೋಕ್ಷ ಹಾಗೂ ಅಪರೋಕ್ಷವಾಗಿ ಈ ಹತ್ತಿಯಿಂದ ಬದುಕು ಕಟ್ಟಿಕೊಂಡಿದ್ದಾರೆ. ಭಾರತ ದೇಶದಲ್ಲಿ ಮಹಾರಾಷ್ಟ್ರ ರಾಜ್ಯವು ಹತ್ತಿ ಉತ್

The Father of the Indian Green Revolution guided our nation towards self-sufficiency and self-confidence. He did everything with the farmer at heart—as a true *Kisan Vaigyanik*

M S SWAMINATHAN WAS A TRUE FARMERS' SCIENTIST



NARENDRA MODI
Prime Minister of India

A few days ago we lost Professor M S Swaminathan. Our nation lost a visionary who revolutionised agricultural science, a stalwart whose contribution to India will always be etched in golden letters. Professor Swaminathan loved India and wanted our nation—and our farmers, in particular—to lead a life of prosperity. Academically brilliant, he could have chosen any career but he was so impacted by the Bengal famine of 1943 that he was clear that, if there was one thing he would do, it would be to study agriculture.

At a relatively young age, he came in contact with Dr Norman Borlaug and followed his work in great detail. In the 1950s, he was offered a faculty position in the US but he rejected it because he wanted to work in India and for India.

I want you all to think about the challenging circumstances in which he stood as a colossus, guiding our nation towards the path of self-sufficiency and self-confidence. In the first two decades after Independence, we were dealing with immense challenges—one of them was food shortages. In the early 1960s, India was grappling with the ominous shadows of famine and it was then that Professor Swaminathan's unyielding commitment and foresight ushered a new era of agricultural prosperity. His pioneering work in agriculture and specific sectors like wheat breeding led to a significant increase in production, turning India from a food-deficient country into a self-sufficient nation. This tremendous achievement earned him the well deserved title of the 'Father of the Indian Green Revolution'.

The Green Revolution offered a glimpse of India's 'Can do spirit'—that if we have a billion challenges, we also have a billion minds with the flame of innovation to overcome those challenges. Five decades after the Green Revolution began, Indian agriculture has become far more modern and progressive. But the very foundations laid by Professor Swaminathan can never be forgotten.

Over the years, he undertook pioneering research in combating parasites affecting the potato crop. His research also enabled potato crops to withstand cold weather. Today, the world is talking about millets or 'Shree Anna' as superfoods, but Professor Swaminathan had encouraged a discourse around millets since the 1990s.



SOUMYADIP SINHA

My personal interactions with Professor Swaminathan were extensive. They began after I took over as Chief Minister of Gujarat in 2001. During those days, Gujarat was not known for its agricultural prowess. Successive droughts, a super cyclone and an earthquake had impacted the growth trajectory of the state. Among the many initiatives we launched was the Soil Health Card, which enabled us to understand the soil better and address problems if they arose. It was in the context of this scheme that I met Professor Swaminathan. He appreciated the scheme and also shared his valuable inputs for it. His endorsement was enough to convince those who were sceptical about the scheme which would eventually set the stage for Gujarat's agricultural success.

Our interactions continued during my chief ministerial tenure and also when I took over as Prime Minister. I met him at the International Agrobiodiversity Congress in 2016 and the next year, in 2017, I launched a two-part book series written by him.

The *Kural* describes farmers as the pin that holds the world together, because it is the farmers who sustain everyone. Professor Swaminathan understood this principle very well. A lot of people call him a *"Krishi Vaigyanik"*—an Agricultural Scientist. But I have always believed that he was even more. He was a true *"Kisan Vaigyanik"*—a Farmers' Scientist. In his heart there was a farmer. The success of his works is not restricted to their academic excellence; it lies in the impact they have had outside the laboratories, in the farms and the fields. His work narrowed the gap between scientific knowledge and its practical application. He consistently advocated for sustainable agriculture, emphasising the delicate balance between human advancement and ecological sustainability. Here, I must also note Professor Swaminathan's special emphasis on improving the lives of small farmers and ensuring they also enjoy the fruits of innovation. He was particularly passionate about improving the lives of women farmers.

There is another aspect about Professor Swaminathan which is remarkable—he stands tall as a paragon of innovation and mentorship. When he won the World Food Prize in 1987, the first recipient of this prestigious honour, he used the prize money to establish a not-for-profit research foundation. Till date, it undertakes extensive work across various sectors. He has nurtured countless minds, instilling in them a passion for learning and innovation. In a rapidly changing world, his life reminds us of the enduring power of knowledge, mentorship, and innovation. He was an institution builder as well, having to his credit many centres where vibrant research takes place. One of his stints was as Director, International Rice Research Institute, Manila. The South Asia Regional Centre of the International Rice Research Institute was opened in Varanasi in 2018.

I will again cite the *Kural* to pay tributes to Dr Swaminathan. It is written there, "If those who have planned have firmness, they will attain what they have desired the way they have desired." Here was a stalwart who decided early on in his life that he wanted to strengthen agriculture and serve farmers. And, he did it exceptionally innovatively and passionately. Dr Swaminathan's contributions continue to inspire and guide us as we navigate the path of agricultural innovation and sustainability. We must also keep reaffirming our commitment to the principles he held dear—championing the cause of farmers and ensuring that the fruits of scientific innovation reach the roots of our agricultural expanse, fostering growth, sustainability, and prosperity for generations to come.

ಕನ್ನಡಪ್ರಭ
BENGALURU Edition
Oct 5, 2023 Page No. 13
Powered by : eReleGo.com

07-10-2023
Ind Exp Pg 08

ರೈತ ಕಿಡಿ ಹೆಚ್ಚು ನೀರು ಬಳಕೆ, ಹೆಚ್ಚು ಹುಲ್ಲು ಸಂಗ್ರಹದ ಕಾರಣ

ಹೆಚ್ಚು ಇಳುವರಿಯ 'ಪುಸಾ' ಭತ್ತ ನಿಷೇಧಿಸಲು ಪಂಜಾಬ್ ನಿರ್ಧಾರ

ಪಟಿಯಾಲಾ: ಹೆಚ್ಚು ನೀರು ಬಳಕೆ ಮಾಡುತ್ತದೆ ಮತ್ತು ಹೆಚ್ಚು ಹುಲ್ಲು ಸಂಗ್ರಹವಾಗುತ್ತದೆ ಎಂಬ ಕಾರಣಕ್ಕೆ ಹೆಚ್ಚು ಇಳುವರಿ ನೀಡುವ 'ಪುಸಾ 44' ಭತ್ತದ ತಳಿಯನ್ನು ಮುಂದಿನ ವರ್ಷದಿಂದ ನಿಷೇಧಿಸಲು ಪಂಜಾಬ್ ಸರ್ಕಾರ ನಿರ್ಧರಿಸಿದೆ. ಇದನ್ನು ರೈತರು ವಿರೋಧಿಸಿದ್ದಾರೆ.



ಪುಸಾ 44 ಭತ್ತದ ತಳಿ ಇತರ ತಳಿಗೆ ಹೋಲಿಸಿದರೆ ಎಕರೆಗೆ 10 ಕ್ವಿಂಟಾಲ್ ಹೆಚ್ಚಿನ ಇಳುವರಿ ಕೊಡುತ್ತದೆ. ಇದರ ಇಳುವರಿ ಪ್ರಮಾಣ ಎಕರೆಗೆ 40 ಕ್ವಿಂಟಾಲ್ ಇರುತ್ತದೆ. ಹೀಗಾಗಿ ನಿಷೇಧಕ್ಕೆ ರೈತರು ಆಕ್ರೋಶಿಸಿದ್ದಾರೆ.

ಆದರೆ ಈ ತಳಿಯ ಭತ್ತ ಬೆಳೆಯಲು ಹೆಚ್ಚಿನ ನೀರು ಬಳಕೆಯಾಗುತ್ತದೆ. ಅಲ್ಲದೇ ಬೆಳೆದ ಬಳಿಕ ಉತ್ಪಾದನೆಯಾಗುವ ಹುಲ್ಲಿನ ಪ್ರಮಾಣವೂ ಅಧಿಕವಾಗಿರುತ್ತದೆ ಎಂಬ ಕಾರಣಕ್ಕೆಇದನ್ನು ನಿಷೇಧಿಸುವುದಾಗಿ ಸರ್ಕಾರ ಘೋಷಿಸಿದೆ. ಪಂಜಾಬ್ ಭಾಗದಲ್ಲಿ ರೈತರು ಹುಲ್ಲನ್ನು ಸುಟ್ಟುಹಾಕುವುದರಿಂದ ಇದು ಹೆಚ್ಚಿನ ವಾಯುಮಾಲಿನ್ಯಕ್ಕೆ ಕಾರಣ ಎಂದು ಸರ್ಕಾರ ಹೇಳಿದೆ.

'ಇತರ ಭತ್ತದ ತಳಿಗಳಿಗೆ ಹೋಲಿಸಿದರೆ ಅಧಿಕ ಇಳುವರಿ ನೀಡುವಇದನ್ನು ನಿಷೇಧಿಸಿದರೆ ನಾವು ಆರ್ಥಿಕ ಸಂಕಷ್ಟಕ್ಕೆ ಸಿಲುಕಲಿದ್ದೇವೆ. ಒಂದು ವೇಳೆ ನಿಷೇಧಿಸುವುದಾದರೆಉಳಿದ ಭತ್ತದ ತಳಿಗಳಿಗೆ ಕನಿಷ್ಠ ಬೆಂಬಲ ಬೆಲೆ ಘೋಷಿಸಬೇಕು' ಎಂದು ಸರ್ಕಾರದ ನಿರ್ಧಾರದ ವಿರುದ್ಧ ಪಂಜಾಬ್ ರೈತರು ಆಕ್ರೋಶ ಹೊರಹಾಕಿದ್ದಾರೆ.